# Telephone Conversation between PM and Prime Minister of Japan

April 10, 2020

---

## ಪ್ರಧಾನ  ಮಂತ್ರಿ ಮತ್ತು ಜಪಾನ್ ನ  ಪ್ರಧಾನ  ಮಂತ್ರಿ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 10, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಶ್ರೀಷ್ಠ  ಶಿಂಜೋ ಅಬೆ, ಜಪಾನ್ ನ  ಪ್ರಧಾನ ಮಂತ್ರಿಯೊಂದಿಗೆ ಇಂದು ದೂರವಾಣಿ  ಸಂಭಾಷಣೆ  ನಡೆಸಿದರು.

ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಹೊರಬರುವ ಜಾಗತಿಕ ಆರೋಗ್ಯ ಮತ್ತು ಆರ್ಥಿಕ ಸವಾಲುಗಳನ್ನು ಇಬ್ಬರು ನಾಯಕರು ಚರ್ಚಿಸಿದರು. ಈ ಬಿಕ್ಕಟ್ಟನ್ನು ಎದುರಿಸಲು ಆಯಾ ದೇಶಗಳಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಅವರು ಚರ್ಚಿಸಿದರು.

ಪ್ರಸ್ತುತ ಬಿಕ್ಕಟ್ಟಿನ ಸಂದರ್ಭದಲ್ಲಿ ತಮ್ಮ ಪ್ರಾಂತ್ಯಗಳಲ್ಲಿ ಇರುವ ಪರಸ್ಪರ ನಾಗರಿಕರಿಗೆ ಒದಗಿಸಿದ ಬೆಂಬಲ ಮತ್ತು ಸೌಲಭ್ಯಕ್ಕಾಗಿ ಇಬ್ಬರು ನಾಯಕರು ಮೆಚ್ಚುಗೆ ವ್ಯಕ್ತಪಡಿಸಿದರು ಮತ್ತು ಅಂತಹ ಸಮನ್ವಯವನ್ನು ಮುಂದುವರಿಸಲು ಒಪ್ಪಿದರು.

ಸಾಂಕ್ರಾಮಿಕ ರೋಗದಿಂದ ಉಂಟಾಗುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಜಗತ್ತಿಗೆ ಸಹಾಯ ಮಾಡುವಲ್ಲಿ ಭಾರತ-ಜಪಾನ್ ಸಹಭಾಗಿತ್ವವು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಇಬ್ಬರು ನಾಯಕರು ಒಪ್ಪಿಕೊಂಡರು.

**ನವ ದೆಹಲಿ**
**ಏಪ್ರಿಲ್ 10, 2020**

DISCLAIMER : This is an approximate translation. The original is available in English on MEA’s website and may be referred to as the official press release.